ಕೋಡ್‌ನ್ನು ಪಡೆಯಲಯ ನಗರ ಪ್ರದೇಶದಲ್ಲಿ ಎಸ್‌ಎಂಎಸ್ ಪದ್ಧತಿ ಜಾರಿಗೊಳಿಸಿದೆ. ಗ್ರಾಮಾಂತರ ಪ್ರದೇಶದಲ್ಲಿ ನೇರವಾಗಿ ಅರ್ಜಿಯನ್ನು ಗ್ರಾಮ ಪಂಚಾಯಿತಿಯಲ್ಲಿ ನೀಡಬಹುದಾಗಿದೆ.

2010ರ ಪೂರ್ವದ ಖಾಯಂ ಪಡಿತರ ಚೀಟಿ ನವೀಕರಣ ಮಾಡುವ ಸಂಬಂಧವಾಗಿ ನಗರ/ಪಟ್ಟಣ ಪ್ರದೇಶದ ಪಡಿತರ ಚೀಟಿದಾರರು ಎಸ್‌ಎಂಎಸ್ ಮಾಡಬೇಕಾಗಿದ್ದು, ಉಳಿದಂತೆ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರು ನವೀಕರಣಕ್ಕೆ ಎಸ್‌ಎಂಎಸ್ ಕಳುಹಿಸುವ ಅಗತ್ಯ ಇರುವುದಿಲ್ಲ. ನೇರವಾಗಿ ಗ್ರಾಮ ಪಂಚಾಯಿತಗೆ ಹೋಗಿ ಪಡಿತರ ಚೀಟಿ ನವೀಕರಿಸಿ ಕೊಳ್ಳಬಹುದಾಗಿದೆ.

ಆ) ಅನ್ವಯಿಸುವುದಿಲ್ಲ.

ಪಡಿತರ ಚೀಟಿಗಳನ್ನು ರದ್ದುಪಡಿಸುವುದು

1682 (2626); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ 1000ಕ್ಕೂ ಹೆಚ್ಚು ಪಡಿತರ ಚೀಟಿಗಳನ್ನು ಕುಟುಂಬದ ಪುರುಷ ಯಜಮಾನರ ಭಾವಚಿತ್ರ ಇಲ್ಲದೇ ಇರುವ ಕಾರಣದಿಂದ ರದ್ದುಪಡಿಸಲು ಇಲಾಖೆ ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಪಡಿತರ ಚೀಟಿಗಳನ್ನು ರದ್ದುಪಡಿಸಲು ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರದ ನಿಯಮಾವಳಿಗಳನ್ನು ರಚಿಸಿದೆಯೇ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಪಡಿತರ ಚೀಟಿಯಲ್ಲಿ ಕುಟುಂಬದ ಪುರುಷ ಯಜಮಾನರ ಭಾವಚಿತ್ರ ಇಲ್ಲದೇ ಇರುವ ಕಾರಣದಿಂದ ರದ್ದುಪಡಿಸಲು ಕ್ರಮವಹಿಸಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಸಾರಿಗೆ ಸಂಸ್ಥೆಯ ಬಸ್ ಕಾರ್ಯಾಚರಣೆ ವಿಸ್ತರಿಸುವುದು

1683 (990); ಶ್ರೀ ಗೋಪಾಲಯ್ಯ ಕೆ.

ಅ) ಬೆಂಗಳೂರು ನಗರದಲ್ಲಿ ಪ್ರತಿದಿನ ಸಂಚರಿಸುತ್ತಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಖ್ಯೆ ಎಷ್ಟು?

ಆ) ಸಾರಿಗೆ ಸಂಸ್ಥೆಯಿಂದ ಪ್ರತಿದಿನ ಬರತಕ್ಕ ಆದಾಯವೆಷ್ಟು;

ಇ) ಬಸ್‌ಗಳ ಕಾರ್ಯಾಚರಣೆಯನ್ನು 20 ಕಿ. ಮೀ. ಗೆ ಸೀಮಿತಗೊಳಿಸಲಾಗಿದೆಯೇ;

ಈ) ಸಾರಿಗೆ ಸಂಸ್ಥೆ ಈ ನಿರ್ಧಾರವನ್ನು ಯಾವಾಗ ಕೈಗೊಳ್ಳಲಾಯಿತು;

ಉ) ಬಸ್ ಕಾರ್ಯಾಚರಣೆಯನ್ನು 25 ಕಿ. ಮೀ. ಗೆ ವಿಸ್ತರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಪ್ರತಿ ದಿನ ಬೆಂಗಳೂರು ನಗರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಒಟ್ಟು 6737 ಬಸ್ಸುಗಳು ಸಂಚರಿಸುತ್ತಿವೆ.

ಆ) ಸಾರಿಗೆ ಸಂಸ್ಥೆಯು ಏಪ್ರಿಲ್ 2014 ರಿಂದ ಜೂನ್ 2014 ರವರೆಗೆ ಪ್ರತಿದಿನ ಸರಾಸರಿ 559.40 ಲಕ್ಷ ರೂ.ಗಳ ಸಾರಿಗೆ ಆದಾಯ ಬರುತ್ತಿದೆ.

ಇ) ಇಲ್ಲ. ಬಿಬಿಎಂಪಿ ವ್ಯಾಪ್ತಿಯಿಂದ 25.0 ಕಿ.ಮೀ. ವರೆಗಿನ್ ವ್ಯಾಪ್ತಿಯಲ್ಲಿ ಸಂಸ್ಥೆಯ ವಾಹನಗಳನ್ನು ಕಾರ್ಯಾಚರಣೆ ಮಾಡಲು ಅಧಿಕಾರ ಹೊಂದಿರುತ್ತದೆ ಹಾಗೂ ನಗರ ವ್ಯಾಪ್ತಿಯು ಬೆಳವಣಿಗೆಯಾದಂತೆಲ್ಲ ಅದರನ್ವಯ ವಾಹನಗಳ ಕಾರ್ಯಾಚರಣೆಗೆ ಅನುಮತಿ ಪಡೆದಿರುತ್ತದೆ.